VIDYAVARDHAKA LAW COLLEGE LIBRARY MYSURU

**0402/2057/0802**

# IV Semester 3 Years LL.B./VIII Semester 5 Years B.A.LL.B./B.B.A.LL.B./ VIII Semester 5 Years B.A.LL.B. (Maj.-Min. System) Examination, March/April 2021
# HUMAN RIGHTS LAW AND PRACTICE (Optional – I)

Duration : 3 Hours Max. Marks : 100

**Instructions :** 1. **Answer Q. No. 9 and any five of the remaining questions.**
2. **Q. No. 9 carries 20 marks and the remaining questions carry 16 marks each.**
3. **Answers should be written completely either in English or in Kannada completely.**

Q. No. 1. What is meant by Human Rights ? Discuss the development of Human Rights Law in India. Marks : 16

ಮಾನವ ಹಕ್ಕುಗಳು ಎಂದರೇನು ? ಭಾರತದಲ್ಲಿ ಮಾನವ ಹಕ್ಕುಗಳ ಕಾನೂನಿನ ಬೆಳವಣಿಗೆಯನ್ನು ಚರ್ಚಿಸಿರಿ.

Q. No. 2. Explain the importance and contents of Universal Declaration of Human Rights. Marks : 16

ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ ಪ್ರಾಮುಖ್ಯತೆ ಹಾಗೂ ಅಡಕವಾಗಿರುವ ಅಂಶಗಳನ್ನು ವಿವರಿಸಿ.

Q. No. 3. Discuss the implementation procedure of the rights provided under the International Covenant on Civil and Political Rights, 1966. Marks : 16

ಅಂತರರಾಷ್ಟ್ರೀಯ ನಾಗರಿಕ ಮತ್ತು ರಾಜಕೀಯ ಹಕ್ಕುಗಳ ಒಡಂಬಡಿಕೆ, 1966 ರಲ್ಲಿ ಒದಗಿಸಿರುವ ಹಕ್ಕುಗಳನ್ನು ಜಾರಿಗೊಳಿಸುವ ಪ್ರಕ್ರಿಯೆಯನ್ನು ಚರ್ಚಿಸಿರಿ.

Q. No. 4. Explain the implementation procedure of the African Charter on Human and People's Rights. Marks : 16

ಆಫ್ರಿಕಾದ ಮಾನವ ಹಕ್ಕುಗಳ ಮತ್ತು ಜನರ ಹಕ್ಕುಗಳ ಸನ್ನದನ್ನು ಕಾರ್ಯರೂಪಗೊಳಿಸಲು ಇರುವ ಪ್ರಕ್ರಿಯೆಯನ್ನು ವಿವರಿಸಿ.

Q. No. 5. Explain the various writs available under the Indian Constitution for the protection of Human Rights. Marks : 16

ಮಾನವ ಹಕ್ಕುಗಳ ಸಂರಕ್ಷಣೆಗಾಗಿ ಭಾರತೀಯ ಸಂವಿಧಾನದಲ್ಲಿ ಒದಗಿಸಿರುವ ವಿವಿಧ ರಿಟ್‌ಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

P.T.O.

Q. No. 6. Explain the important provisions of Protection of Human Rights Act, 1993. Marks : 16

1993 ರ ಮಾನವ ಹಕ್ಕು ಸಂರಕ್ಷಣಾ ಅಧಿನಿಯಮದ ಪ್ರಮುಖ ಅನುಬಂಧಗಳನ್ನು ವಿವರಿಸಿ.

Q. No. 7. Explain the Rights of the Child guaranteed under the Convention on the Rights of the Child. Marks : 16

ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ ಖಾತ್ರಿಗೊಳಿಸಲ್ಪಟ್ಟ ಮಕ್ಕಳ ಹಕ್ಕುಗಳನ್ನು ವಿವರಿಸಿ.

Q. No. 8. Write short notes on **any two** of the following : Marks : 2×8=16

ಕೆಳಗಿನ ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

(a) National Human Rights Commission

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ

(b) Amnesty International Institute

ಅಂತರರಾಷ್ಟ್ರೀಯ ಅಮ್ನೆಸ್ಟಿ ಸಂಸ್ಥೆ

(c) Rights of aged persons.

ವೃದ್ಧರ ಹಕ್ಕುಗಳು.

Q. No. 9. Solve **any two** of the following problems : Marks : 2×10=20

ಕೆಳಗಿನ ಯಾವುದಾದರೂ **ಎರಡು** ಸಮಸ್ಯೆಗಳಿಗೆ ಪರಿಹಾರ ತಿಳಿಸಿರಿ :

(a) The under-trial prisoners in jail are handcuffed during transit between the jail and the court for trial. Is there any violation of their Human Rights ?

ಜೈಲಿನಲ್ಲಿರುವ ವಿಚಾರಣಾಧೀನ ಖೈದಿಗಳನ್ನು ನ್ಯಾಯಾಲಯಕ್ಕೆ ಕರೆತರುವಾಗ ಪೊಲೀಸರು ಬೇಡಿಗಳನ್ನು ಹಾಕಿ ಕರೆತರುತ್ತಿದ್ದಾರೆ. ಈ ಖೈದಿಗಳ ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆಯೇ ?

(b) A person aged about 24 years was detained by the sub-inspector of police at a police out post on the charge of theft. Later, his dead body, with wounds was found near a Railway Station Flyover. All the evidence indicated custodial death. The man's father has filed a writ petition against the government and police for monetary compensation. Is he entitled to get compensation ?

ಒಬ್ಬ 24 ವಯಸ್ಸಿನ ವ್ಯಕ್ತಿಯನ್ನು ಕಳ್ಳತನ ಆರೋಪದ ಮೇಲೆ ಪೊಲೀಸ್ ಚೌಕಿಯ ಹತ್ತಿರ ಸಬ್-ಇನ್‌ಸ್ಪೆಕ್ಟರ್‌ರವರು ವಶಕ್ಕೆ ತೆಗೆದುಕೊಂಡರು. ತದನಂತರ ಆ ವ್ಯಕ್ತಿಯ, ಗಾಯಗಳಿಂದ ಕೂಡಿದ ಮೃತದೇಹ ರೈಲು ಹಳಿಗಳ ಪಕ್ಕದಲ್ಲಿನ ಮೇಲುಸೇತುವೆ ಮೇಲೆ ಸಿಕ್ಕಿತು. ಎಲ್ಲಾ ಪುರಾವೆಗಳೂ ಆತ ಪೊಲೀಸರ ವಶದಲ್ಲೇ ಸಾವನ್ನಪ್ಪಿರುವುದನ್ನು ಸೂಚಿಸುತ್ತದೆ. ಆತನ ತಂದೆ ಪೊಲೀಸರು ಮತ್ತು ಸರಕಾರದ ವಿರುದ್ಧ ಹಣಕಾಸಿನ ಪರಿಹಾರಕ್ಕಾಗಿ ದಾವೆ ಹೂಡುತ್ತಾನೆ. ಆತ ಪರಿಹಾರ ಪಡೆಯಲು ಅರ್ಹನೇ ?

(c) Mr. Rangappa, a coolie, working in Bangalore – Urban, resident of Chamarajpet, underwent Covid-19 RTPCR Test conducted by Corporator of Chamarajpet ward no. 144. His Covid-19 RTPCR Test report was positive. Immediately, he was taken to various Govt. Hospitals, but he was denied medical treatment due to non-availability of beds and ventilator on 9-4-2020. He had registered under Ayushman Bharath, Health Scheme in association with State and Central Govt., Universal Health Coverage. Later he was admitted to a Pvt. Hospital for medical treatment, where he had to spend Rs. 1 lakh for his treatment, He claims that amount from the Government. Decide the liability of the Government.

ರಂಗಪ್ಪ ಎಂಬುವವನು, ಬೆಂಗಳೂರು ನಗರದಲ್ಲಿ ಕೂಲಿಕಾರನಾಗಿದ್ದು, ಚಾಮರಾಜಪೇಟೆ ನಿವಾಸಿಯಾಗಿರುತ್ತಾನೆ. ಕಾರ್ಪೋರೇಟರ್ ನಡೆಸಿದ/ ಆಯೋಜಿಸಿದ ಚಾಮರಾಜಪೇಟೆ ವಾರ್ಡ್ ನಂ. 144 Covid-19 RTPCR ಟೆಸ್ಟ್ ಶಿಬಿರದಲ್ಲಿ ಪರೀಕ್ಷೆ ಮಾಡಿಕೊಳ್ಳುತ್ತಾನೆ. ಅವನ Covid-19 (RTPCR Test) ಟೆಸ್ಟ್ ಫಲಿತಾಂಶ ಪಾಸಿಟಿವ್ (positive) ಬಂದಿರುತ್ತದೆ. ತಕ್ಷಣವೇ, ಅವನನ್ನು ಅನೇಕ ಸರ್ಕಾರಿ ಆಸ್ಪತ್ರೆಗಳಿಗೆ ಕರೆದೊಯ್ಯುತ್ತಾರೆ. ಆದರೆ 9-4-2020 ರಂದು ಹಾಸಿಗೆ ಮತ್ತು ವೆಂಟಿಲೇಟರ್ಸ್ ಅವಶ್ಯಕತೆ ಇರದ ಕಾರಣದಿಂದ ವೈದ್ಯಕೀಯ ಚಿಕಿತ್ಸೆ ಸಿಗಲಿಲ್ಲ. ರಂಗಪ್ಪನು, ಆಯುಷ್ಮಾನ್ ಭಾರತ್, ಕೇಂದ್ರ ಮತ್ತು ರಾಜ್ಯ ಸರ್ಕಾರ ಸಂಯೋಜಿತ ಆರೋಗ್ಯ ಯೋಜನೆ ಸಾರ್ವತ್ರಿಕ ಆರೋಗ್ಯ ರಕ್ಷಣೆ ಅಡಿಯಲ್ಲಿ ನೋಂದಣಿ ಮಾಡಿರುತ್ತಾನೆ. ರಂಗಪ್ಪನನ್ನು ಖಾಸಗಿ ಆಸ್ಪತ್ರೆಗೆ ಸೇರಿಸಿ ವೈದ್ಯಕೀಯ ಚಿಕಿತ್ಸೆ ಕೊಡಿಸಲಾಯಿತು. ಆ ಚಿಕಿತ್ಸೆಗಾಗಿ ಆತನು 1 ಲಕ್ಷ ರೂಪಾಯಿ ಖರ್ಚು ಮಾಡಿರುತ್ತಾನೆ. ಆ ಹಣವನ್ನು ಪಡೆಯಲು ಸರ್ಕಾರದ ವಿರುದ್ಧ ನ್ಯಾಯಾಲಯದ ಮೊರೆ ಹೋಗಿದ್ದಾನೆ. ಸರ್ಕಾರದ ಹೊಣೆಗಾರಿಕೆಯನ್ನು ನಿರ್ಣಯಿಸಿ.

---